ಕರ್ನಾಟಕ ಸರ್ಕಾರ

**ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**

**ಮಡಿಕೇರಿ, ಕೊಡಗು ಜಿಲ್ಲೆ.**

Phone: 08272 298220 Website: www.kimskodagu.kar.nic.in E-mail: directormckodagu@gmail.com

ಸಂಖ್ಯೆ: ಕೊ.ವೈ.ವಿ.ಸಂ.ಮ/ಸರಬ(2):50 :2018-19 ದಿನಾಂಕ 16.07.2018

## ದರಪಟ್ಟಿಯನ್ನು ಸಲ್ಲಿಸುವ ಬಗ್ಗೆ.

ವಿಷಯ:- ಈ ಸಂಸ್ಥೆಯ ಅವರಣದಲ್ಲಿ ಅಳವಡಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಮತ್ತು ಗೃಹಬಳಕೆ ನೀರಿನ ಘಟಕದ **[Dosing System]**ನ್ನು ಪರಿಶೀಲಿಸಿ ದುರಸ್ಥಿಗೊಳಿಸುವ ಬಗ್ಗೆ

---

ಕೊಡಗು ವೈದ್ಯಕೀಯ ವಿಜ್ಞಾನಗಳ ಭೋದಕ ಆಸ್ಪತ್ರೆ, ಮಡಿಕೇರಿ ಇಲ್ಲಿನ ಅವರಣವಲ್ಲಿ ಶುದ್ಧ ಕುಡಿಯುವ ನೀರಿನ ಮತ್ತು ಗೃಹಬಳಕೆ ನೀರಿನ ಘಟಕವನ್ನು **[R.O & Water Treatment Plant]** ಅಳವಡಿಸಲಾಗಿರುತ್ತದೆ, ಸದರಿ ನೀರಿನ ಘಟಕಗಳ **[Dosing System]**ಗಳನ್ನು ಪರಿಶೀಲಿಸಿ ಅಗತ್ಯವಿರುವ ಬಿಡಿಭಾಗಗಳನ್ನು ಅಳವಡಿಸಿ, ಸರ್ವಿಸ್ ಮಾಡಿಸಲು ತಗಲುವ ವೆಚ್ಚಕ್ಕೆ ದರಪಟ್ಟಿಯನ್ನು ಸಲ್ಲಿಸಲು ಸ್ಥಳೀಯ ಅನುಭವಿ ಸಂಸ್ಥೆಗಳಿಂದ ದರಪಟ್ಟಿಯನ್ನು ಕರೆಯಲಾಗಿದೆ, ನಮೂದಿಸಿರುವ ದರಪಟ್ಟಿಯನ್ನು ದಿನಾಂಕ 23.07.2018ರ ಸಂಜೆ 4.00ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ, ನಂತರ ಬರುವ ದರಪಟ್ಟಿಗಳನ್ನು ಅಂಗೀಕರಿಸುವುದಿಲ್ಲಾ.

| Sl.No | Name of the Item | Rate |
|---|---|---|
| 1 | Estimation for Complete Service of Dosing System of Water Treatment Plant & R.O. System Installed at KOIMS, Madikeri | |

ನಿಬಂಧನೆಗಳು:

1. ಸರಬರಾಜುದಾರರು ಅದಿಕೃತ ಸರಬರಾಜುದಾರರಾಗಿರಬೇಕು ಮತ್ತು ಚಾಲ್ತಿಯಲ್ಲಿರುವ ಪರವಾನಗಿಯನ್ನು ಹೊಂದಿರಬೇಕು
2. ಸದರಿ ಶುದ್ಧ ಕುಡಿಯುವ ನೀರಿನ ಮತ್ತು ಗೃಹಬಳಕೆ ನೀರಿನ ಘಟಕಗಳನ್ನು **[R.O & Water Treatment Plant]** ನ್ನು ಖುದ್ದಾಗಿ ಅಥವಾ ಸಂಬಂಧಪಟ್ಟ ಸಂಸ್ಥೆಯವರು ಸೂಕ್ತ ತಜ್ಞ ಸಿಬ್ಬಂದಿಯನ್ನು ನಿಯೋಜಿಸಿ ದುರಸ್ಥಿಗೊಳಿಸಬೇಕಾಗಿರುವ **[Dosing System]**ಗಳನ್ನು ಈ ಸಂಸ್ಥೆಯ ವಿದ್ಯುತ್ ತಂತ್ರಜ್ಞರು / ಪ್ಲಬಂರ್ ರವರ ಸಮಕ್ಷಮ ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ, ದರಪಟ್ಟಿಯನ್ನು ಸಲ್ಲಿಸುವ ಮುಂಚೆ ಪರಿಶೀಲಿಸಿ ದರಪಟ್ಟಿ ಸಲ್ಲಿಸುವುದು.
3. ಲಕೋಟೆಯ ಮೇಲೆ ಕೊಡಗು ವೈದ್ಯಕೀಯ ವಿಜ್ಞಾನಗಳ ಭೋದಕ ಆಸ್ಪತ್ರೆ, ಮಡಿಕೇರಿ ಇಲ್ಲಿ ಅಳವಡಿಸಿರುವ **[R.O & Water Treatment Plant]** ಘಟಕಗಳ **[Dosing System]**ಗಳನ್ನು ಪರಿಶೀಲಿಸಿ ಅಗತ್ಯವಿರುವ ಬಿಡಿಭಾಗಗಳನ್ನು ಅಳವಡಿಸಿ, ಸರ್ವಿಸ್ ಮಾಡಲು ದರಪಟ್ಟಿ ಎಂದು ಬರೆದ ಮೊಹರು ಮಾಡಿದ ದರಪಟ್ಟಿಯನ್ನು ದಿನಾಂಕ 23.07.2018ರ ಸಂಜೆ 4.00 ಗಂಟೆಯೊಳಗೆ ಈ ಕಛೇರಿಗೆ ಸಲ್ಲಿಸುವುದು, ನಂತರ ಬರುವ ದರಪಟ್ಟಿಗಳನ್ನು ಅಂಗೀಕರಿಸುವುದಿಲ್ಲ, ಸಲ್ಲಿಸುವ ದರಪಟ್ಟಿಗಳನ್ನು ನಂತರದ ಕಾರ್ಯನಿರತ ದಿನದಂದು ಪೂರ್ವಾಹ್ನ 11.00 ಗಂಟೆಗೆ ಹಾಜರಿರುವ ಸಮಿತಿಯ ಸದಸ್ಯರ ಸಮ್ಮುಖದಲ್ಲಿ ತೆರೆಯಲಾಗುವುದು.
4. ದರಪಟ್ಟಿ ಜೊತೆಯಲ್ಲಿ ಈ ಸಂಸ್ಥೆಯಲ್ಲಿ ಅಳವಡಿಸಿರುವ ಘಟಕದ ಸಮಾನ ಅಥವಾ ಅದಕ್ಕಿಂತ ಹೆಚ್ಚಿನ ಕ್ಯಾಪಾಸಿಟಿ ಇರುವಂತಹ ಘಟಕಗಳನ್ನು ನಿರ್ವಹಣೆ ಮಾಡಿರುವ ಬಗ್ಗೆ ಸೂಕ್ತ ದಾಖಲೆಗಳು ಹಾಗೂ ಸಂಬಂಧಿಸಿದ ಸಂಸ್ಥೆಯಿಂದ ಪಡೆದಿರುವ ತೃಪ್ತಿಕರ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
5. ಸೂಚಿಸಿರುವ ದರಗಳು ಒಪ್ಪಿಗೆಯಾದಲ್ಲಿ ನಿಗಧಿಪಡಿಸಿರುವ ಅವಧಿಯಲ್ಲಿ ಯಾವುದೇ ದರ ಬದಲಾವಣೆ ಮಾಡುವಂತಿಲ್ಲ, ಸಲ್ಲಿಸುವ ದರ ಕನಿಷ್ಠ 6 ತಿಂಗಳ ಅವಧಿಯವರಗೆ ಚಾಲ್ತಿಯಲ್ಲಿರತಕ್ಕದ್ದು ಹಾಗೂ ಬಿಡಿಭಾಗಗಳ ದರವು MRP ಯನ್ನು ಮೀರುವಂತಿಲ್ಲ
6. ಸಲ್ಲಿಸುವ ದರಗಳಲ್ಲಿ ತೆರಿಗೆ ಹಾಗೂ ಅನ್ವಯವಾಗುವ ಇತರೆ ತೆರಿಗೆಗಳನ್ನು ಪ್ರತ್ಯೇಕವಾಗಿ ನಮೂದಿಸುವುದು ಇಲ್ಲವಾದಲ್ಲಿ ಸೂಚಿಸಿದ ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುವಂತೆ ಪರಿಗಣಿಸಲಾಗುವುದು ಹಾಗೂ ತೆರಿಗೆ ಸಲುವಾಗಿ ಯಾವುದೇ ಹೆಚ್ಚುವರಿ ಮೊತ್ತವನ್ನು ನೀಡಲಾಗುವುದಿಲ್ಲ.
7. ದರಪಟ್ಟಿಯನ್ನು ಅಂಗೀಕರಿಸುವ / ತಿರಸ್ಕರಿಸುವ ಅಧಿಕಾರ ಈ ಕೆಳಸಹಿದಾರರು ಹೊಂದಿರುತ್ತಾರೆ.
8. ಇತರ ನಿಬಂಧನೆಗಳು ಅನ್ವಯವಾಗುತ್ತದೆ.

ನಿರ್ದೇಶಕರು ಹಾಗೂ ಡೀನ್

ನಿರ್ದೇಶಕರು ಹಾಗೂ ಡೀನ್

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಕರ್ನಾಟಕ ಸರ್ಕಾರ

**ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**

**ಮಡಿಕೇರಿ, ಕೊಡಗು ಜಿಲ್ಲೆ,**

Phone: 08272 298220 Website: www.kimskodagu.kar.nic.in E-mail: directormckodagu@gmail.com

ಪ್ರತಿಯನ್ನು:-

1. ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ, ಇವರಿಗೆ ಸಲ್ಲಿಸುತ್ತಾ, ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಣೆಯ ಕೃಪೆಗಾಗಿ ಸಲ್ಲಿಸಲಾಗಿದೆ.
2. ನಿರ್ದೇಶಕರು ಮತ್ತು ಡೀನ್, ವೈದ್ಯಕೀಯ ಕಾಲೇಜು ಹಾಸನ/ಗುಲ್ಬರ್ಗ/ಗದಗ/ಕೊಪ್ಪಳ/ಚಾಮರಾಜನಗರ/ಕಾರವಾರ, ಇವರಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ಉಪ ನಿರ್ದೇಶಕರು, ವಾರ್ತಾ ಇಲಾಖೆ, ವಾರ್ತಾಭವನ, ಮಡಿಕೇರಿ ಇವರಿಗೆ ಕಳುಹಿಸುತ್ತಾ, ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
4. ವೈದ್ಯಕೀಯ ಅಧೀಕ್ಷಕರ, ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ, ಮಡಿಕೇರಿ ಇವರಿಗೆ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ಜಿಲ್ಲಾ ಆರೋಗ್ಯ ಮತ್ತು ಕುಕ ಅಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
6. ಕಛೇರಿ ಸೂಚನಾ ಫಲಕಕ್ಕೆ
7. ಕಛೇರಿ ಪ್ರತಿ.